KATK900005432019

**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ತಿಪಟೂರು**

**ಎಸ್.ಸಿ.ಸಂಖ್ಯೆಃ 10039/2019**

**ಪ್ರಮಾಣೀಕರಿಸಿದ ದಿನಾಂಕಃ 21-09-2024**
**ಚಾ.ಸಾ-10**
**ಫಿರ್ಯಾ.ಸಾ-8**

| | |
|---|---|
| ಹೆಸರು | ಟಿ.ಆರ್ ರಾಜಶೇಖರಯ್ಯ |
| ತಂದೆ ಹೆಸರು | ಎನ್. ರುದ್ರಯ್ಯ |
| ವಯಸ್ಸು | 65 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸಸ್ಥಳ | ತಂಡಗ ಗ್ರಾಮ |

**ಮುಖ್ಯವಿಚಾರಣೆ, ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-4 ಅಶೋಕ ಗೊತ್ತು. ಮೃತ ಸುರೇಶ್ ಸಹಾ ನನಗೆ ಗೊತ್ತು. ಅವರು ಸುಮಾರು ಮೂರು ನಾಲ್ಕು ವರ್ಷಗಳ ಹಿಂದೆ ರಾಮಮಂದಿರದ ಬಳಿ ಕೊಲೆಯಾಗಿದ್ದ. ಇದಾದ ಎರಡು ತಿಂಗಳ ನಂತರ ನಾನು ಪೊಲೀಸ್ ಠಾಣೆಗೆ ಯಾವುದೋ ಕೆಲಸಕ್ಕೆ ಹೋಗಿದ್ದೆ. ಆಗ ಪೊಲೀಸ್ ನವರು ನಮ್ಮ ಊರಿನ ರಾಮಮಂದಿರದ ಹತ್ತಿರ ಸುರೇಶ್ ಕೊಲೆಯಾದ ಬಗ್ಗೆ ಸಹಿಯನ್ನು ತೆಗೆದುಕೊಂಡರು. ನಾನು ಸಹಿ ಮಾಡಲ್ಲ ಅಂದೆ, ಅದಕ್ಕೆ ಏನು ಆಗಲ್ಲ ಸಹಿ ಮಾಡಿ ಅಂದ್ರು. ನಾನು ಸಹಿ ಮಾಡಿದೆ. ಈ ಸಹಿಗಳು ನನ್ನವೇ. (ಸಾಕ್ಷಿ ಮಹಜರ್ ನ ಜೆರಾಕ್ಸ್ ನಕಲಿನಲ್ಲಿನ ಸಹಿಗಳನ್ನು ಗುರುತಿಸಿದ್ದಾರೆ. ದಾಖಲೆ ಜೆರಾಕ್ಸ್ ಆದ್ದರಿಂದ ಗುರುತಿಸಲು ಅನುಮತಿಸಿಲ್ಲ). ಈಗ ನೋಡಿದ ಸಹಿಗಳು ನನ್ನವಲ್ಲ. (ಸಾಕ್ಷಿಗೆ ಮು.ಮಾಲು-1 ರಿಂದ 4 ನ್ನು ಇಟ್ಟ ಚೀಲಗಳ ಮೇಲಿನ ಚೀಟಿಯಲ್ಲಿನ ಟಿ.ಆರ್ ರಾಜಶೇಖರಯ್ಯ ಎಂಬ ನಾಲ್ಕು ಸಹಿಗಳನ್ನು ತೋರಿಸಲಾಯಿತು). ನಾನು ಸಹಿ

ಮಾಡಿದ್ದು ಸಂಜೆ. ಆ ಸಂದರ್ಭದಲ್ಲಿ ಪೊಲೀಸ್ ನವರು ಏನನ್ನೂ ಅಮಾನತ್ತು ಪಡಿಸಿಕೊಳ್ಳಲಿಲ್ಲ.

**(ಈ ಹಂತದಲ್ಲಿ ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಸರ್ಕಾರಿ ಅಭಿಯೋಜಕರು ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.)**

**<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

ದಿನಾಂಕ 17.02.2019 ರಂದು ಬೆಳಗ್ಗೆ 7.15 ರಿಂದ ರಾತ್ರಿ 8 ಗಂಟೆಯ ಒಳಗೆ ನಾನು ಸಹಿ ಮಾಡಿದ್ದು ಎಂದರೆ ನಾನು ಸಂಜೆ ಸಹಿ ಮಾಡಿದ್ದು. ಆ ಸಂದರ್ಭದಲ್ಲಿ ಪಿಎಸ್ಐ ರವರ ಕೊಠಡಿಯಲ್ಲಿ ಮೃತನಿಗೆ ಸಂಬಂಧ ಪಟ್ಟ ರಕ್ತ ಕಲೆಯಾದ ಒಂದು ಜರ್ಕಿನ್, ಶರ್ಟ್, ಪ್ಯಾಂಟ್ ಮತ್ತು ರಕ್ತ ಕಲೆಯಾದ ಒಂದು ಖಾಕಿ ಬಣ್ಣದ ನಿಕ್ಕರ್ ನ್ನು ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ. ಆ ಬಟ್ಟೆಗಳನ್ನು ನಾಲ್ಕು ಪ್ರತ್ಯೇಕವಾದ ಚೀಲಗಳಲ್ಲಿ ಹಾಕಿ ಸೀಲುಮಾಡಿ, ಮಹಜರ್ ಕ್ರಮ ಜರುಗಿಸಿ ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ನಾಲ್ಕು ಚೀಟಿಗಳಲ್ಲಿ ನನ್ನ ಸಹಿಯನ್ನು ಪಡೆದುಕೊಂಡು ಆ ನಾಲ್ಕು ಚೀಲಗಳ ಮೇಲೆ ಒಂದೊಂದನ್ನು ಪ್ರತ್ಯೇಕವಾಗಿ ಅಂಟಿಸಿದ್ದರು ಎಂದರೆ ಸರಿಯಲ್ಲ. ಮಹಜರ್ ನ ಅಂಶಗಳನ್ನು ತಿಳಿದುಕೊಂಡು ನಾನು ಸ್ಥಳದಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ನಾನು ಆರೋಪಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತದೇಹವನ್ನು ನಾನು ಸ್ಥಳ ಮಹಜರ್ ಮಾಡುವಾಗ ನೋಡಿದ್ದೆ ಎಂದರೆ ಸರಿಯಲ್ಲ.

**(ಆರೋಪಿ ಪರ ವಕೀಲರು ಪಾಟೀಸವಾಲು ಇಲ್ಲವೆಂದಿದ್ದಾರೆ).**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).**

**ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಪುಷ್ಪಾವತಿ.ವಿ)**
**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ತಿಪಟೂರು**